‘ಶೂರ್ಪನಖಿ! ಛೇ ನಮ್ಮ ಸುಖ ನೆಮ್ಮದಿಗಳನ್ನು ಹಾಳು ಮಾಡಿದ ರಾಕ್ಷಸಿ. ಅಂದು ಅದೆಷ್ಟು ವೈಯಾರ ಮಾಡುತ್ತಾ ಬಳಿಬಂದಳು. ಕಾಡು ಹೆಣ್ಣುಗಳಲ್ಲಿ ಇಂಥಾ ಒನಪು ಇರುತ್ತದೆಯೇ?! ಇಲ್ಲಾ..., ನಮ್ಮ ಅಯೋಧ್ಯಾ ನಗರದಲ್ಲಾದರೂ ಇಂಥಾ ವಯ್ಯಾರದ ಹೆಣ್ಣುಗಳನ್ನು ನಾನು ಕಂಡಿರುವೆನಾ? ಛೇ..., ಅದೆಲ್ಲಾ ನನಗೆ ಹೇಗೆ ತಿಳಿಯಬೇಕು? ನಾನಂತೂ ಅಣ್ಣನೊಡನೆ ಯಾವಾಗಲೂ ಋಷ್ಯಾಶ್ರಮ, ಗುರುಕುಲ, ಅಧ್ಯಯನ, ರಾಕ್ಷಸಗಣ ಸಂಹಾರ... ಹೀಗೆಯೇ ಕಾಲಕಳೆದವನು. ಮದುವೆಯ ವಯಸ್ಸಲ್ಲದಿದ್ದರೂ ಅಣ್ಣನ ಸಹವಾಸದಿಂದ ನಮ್ಮ ನಾಲ್ವರಿಗೂ ಕಲ್ಯಾಣವಾಗಿ ಹೋಯ್ತು. ವಿವಾಹ ಎಂದರೆ ಏನೆಂದು ಸಹ ಸರಿಯಾಗಿ ತಿಳಿಯದ ವಯಸ್ಸು. ಅಂದದ ಬೊಂಬೆಯ ಹಾಗಿದ್ದ ಊರ್ಮಿಳೆಯನ್ನು ದೊಡ್ಡವರೆಲ್ಲಾ ಸೇರಿ ನನಗೆ ಜೊತೆ ಮಾಡಿದರು. ಆದರೆ, ಆ ಬೊಂಬೆಯೊಡನೆ ಸರಿಯಾಗಿ ನಾಲ್ಕು ಮಾತನಾಡಿ ಸಲುಗೆ ಬೆಳೆಸಿಕೊಳ್ಳುವ ಹೊತ್ತಿಗಾಗಲೆ ಕಿರಿಯ ಚಿಕ್ಕಮ್ಮನೊಡನೆ ಮನಸ್ತಾಪವೋ, ಜಗಳವೋ ಏನೋ ನಡೆದು ಕಾಡಿನ ದಾರಿ ಹಿಡಿದ ಅಣ್ಣನೊಡನೆ ಬಂದೆ’ ಊರ್ಮಿಳೆಯ ನೆನಪಿಗೆ ಲಕ್ಷ್ಮಣನ ಮೈ ಒಮ್ಮೆ ಸಣ್ಣಗೆ ಕಂಪಿಸಿತು.

‘ಕಾಡಿನ ಹಾದಿಯಾದರೂ ಸುಗಮವಾಗಿತ್ತೇ? ನನಗೆ ಮತ್ತು ರಾಮಣ್ಣನಿಗಾದರೆ ಇದು ಬಾಲ್ಯದಿಂದಲೇ ಅಭ್ಯಾಸವಾಗಿದ್ದ ವಿಚಾರ. ಹಿಂದೆಲ್ಲಾ ವಿಶ್ವಾಮಿತ್ರ ಮಹಾಮುನಿಗಳೊಡನೆ ಅದೆಷ್ಟೋ ಕಾಡುಮೇಡು ಅಲೆದಿದ್ದೆವಲ್ಲಾ. ಆದರೆ ಅರಮನೆಯಲ್ಲಿ ಸುಖವಾಗಿ ಬೆಳೆದು, ಯೌವನದ ಹೊಸ್ತಿಲಲ್ಲಿ ಜಗದೇಕವೀರರ ಕೈ ಹಿಡಿದು, ಭುವನ ಪ್ರಸಿದ್ಧ ಅಯೋಧ್ಯಾ ನಗರಿ ಸೊಸೆಯರಾಗಿ ಅರಮನೆಗೆ ಬಂದ ರಾಜಕುವರಿಯರಿಗೆ ಕಾಡಿನ ದುರ್ಗಮ ಹಾದಿ ಸವೆಸುವುದು ಅಷ್ಟು ಸುಲಭವೇ? ಈ ಸಾಮಾನ್ಯ ಅರಿವು ಇದ್ದರಿಂದಲೇ ನಾನು ಊರ್ಮಿಳೆಯನ್ನು ನಮ್ಮೊಡನೆ ಬರಬೇಡವೆಂದು ಆಕೆಯನ್ನು ಕೇಳಿಕೊಂಡಿದ್ದೆ. ‘‘ಮತ್ತೆ ನನ್ನಕ್ಕ ಸೀತೆ ಬರುತ್ತಾಳಂತಲ್ಲಾ! ನಾನೇಕೆ ನಿಮ್ಮೊಡನೆ ಬರುವುದು ಬೇಡ? ನನ್ನ ಮೇಲೆ ನಿಮಗೆ ಒಲವಿಲ್ಲವೇ? ಅದಕ್ಕೇ ನಿಮ್ಮೊಡನೆ ಕರೆದೊಯ್ಯುತ್ತಿಲ್ಲ”ಎಂದು ಕೇಳಿ ಗುಲಾಬಿ ಕೆನ್ನೆಯನ್ನು ಊದಿಸಿಕೊಂಡಿದ್ದಳು ಮುಗ್ಧೆ! ಆ ಮಾತಿನ ಸೊಬಗಿಗೇ ಸೋತು ಹೋಗಿದ್ದೆ. ಆಗಲೇ ಆಕೆಯನ್ನು ಅಪ್ಪಿ ಚೆಂದುಟಿಗಳಿಗೆ ಮುತ್ತನೊತ್ತಿ ನನ್ನ ಒಲವನ್ನು ಪ್ರಕಟಿಸುವ ಬಯಕೆ ಮೂಡಿತ್ತು. ಆದರೆ ಪರಿಸ್ಥಿತಿಯ ಗಂಭೀರತೆಯು ನನ್ನ ಮನವನ್ನು ಬಂಧಿಸಿತ್ತು. ಇದ್ದ ಅಲ್ಪ ಸಮಯದಲ್ಲೇ ಸುಕೋಮಲೆಗೆ ಕಾಡಿನ ಕಷ್ಟಗಳನ್ನು ಬಿಡಿಸಿ ಹೇಳಿದೆ. ನನ್ನ ಅಮ್ಮ ಸುಮಿತ್ರಾದೇವಿಯವರ ಯೋಗಕ್ಷೇಮ ವಿಚಾರಿಸಲಿಕ್ಕೆ ಊರ್ಮಿಯಾದರೂ ಅರಮನೆಯಲ್ಲೇ ಉಳಿಯಲಿ ಎಂಬ ಸ್ವಾರ್ಥವೂ ಅದರಲ್ಲಿ ಸೇರಿತ್ತು. ನನ್ನ ಮಾತನ್ನು ಸಾವಧಾನದಿಂದ ಕೇಳಿಸಿಕೊಂಡು, “ನೀವು ಹೇಳಿದಂತೆಯೇ ಆಗಲಿ, ಬರುವುದಿಲ್ಲ ಬಿಡಿ” ಎನ್ನುತ್ತಾ, ತನ್ನ ವಿಶಾಲ ಕಣ್ಣಕೊಳದಲ್ಲಿ ಕಂಬನಿ ತುಳುಕಿಸುತ್ತಾ, “ನನ್ನಕ್ಕ ಸೀತೆ ಜೋಪಾನ. ಆಕೆಯ ಮೇಲೆ ಭಾವ ರಾಮಚಂದ್ರರ ಜೀವವಷ್ಟೇ ಅಲ್ಲ, ನನ್ನ ಜೀವವೂ ನಿಂತಿದೆ. ಆ ರಾಜಕುವರಿಗೆ ನೋವಾಗದಂತೆ ನೋಡಿಕೊಳ್ಳಿ. ಮಹಾರಾಣಿಯಾಗಿ ಪಟ್ಟಾಭಿಷಿಕ್ತಳಾಗಿ ಸಕಲ ಅಯೋಧ್ಯಾವಾಸಿಗಳ ಮಾತೆಯಾಗಿ, ಸರ್ವರಿಗೂ ಮಮಕಾರ ತೋರಬೇಕಾದವಳು, ತಾನೇ ಇತರರಿಂದ ಮರುಕ ಹೊಂದುವಂತೆ ಆಗಿಹೋಯಿತಲ್ಲಾ! ಯಾವ ಕಾರಣಕ್ಕೂ ತವರೂರ ಸುಖದ ದಿನಗಳ ನೆನೆದು ಕಾಡಿನಲ್ಲಿ ಕಂಗೆಡದಂತೆ, ದುಃಖಿಸದಂತೆ ನೋಡಿಕೊಳ್ಳಿರಿ. ಅಕ್ಕ ಭಾವರನ್ನು ಅನುನಯಿಸಿಕೊಂಡು ನಡೆಯಿರಿ. ನೀವೇನಾದರೂ ಅಕ್ಕಂದಿರೊಡನೆ ಬೆಳೆದಿದ್ದರೆ, ತನ್ನ ಪ್ರೀತಿಯ ಹಿರಿಯಕ್ಕನೊಡನೆ ಪ್ರಿಯನಾದ ಒಬ್ಬ ತುಂಟ ಸಹೋದರ ತಮಾಷೆಯಾಗಿ ಹೇಗೆ ನಡೆದುಕೊಳ್ಳುವನೋ ಹಾಗೆಯೇ ನನ್ನ ಅಕ್ಕನೊಡನೆ ಪ್ರೀತಿಯಿಂದ ನಡೆದುಕೊಳ್ಳಿರಿ.” ಎಂದು ಬೇಡುತ್ತಾ, ಅದರ ಎಡೆಯಲ್ಲೇ ನನಗೂ ಧೈರ್ಯ ಸಾಂತ್ವನಗಳನ್ನು ಹೇಳುತ್ತಾ ಪುಟ್ಟ ಉಪದೇಶವನ್ನೇ ನೀಡಿದ್ದಳು! ಭಲಾ, ಇದು ರಾಜವಂಶದ ರಕ್ತದ ಗುಣವೇ ಇರಬೇಕು. ಅಂತೂ ನನಗೆ ಚೆನ್ನದಂತಹಾ ಮಡದಿಯೇ ಸಿಕ್ಕಿದ್ದಾಳೆಂದು ಕಾಡ ದುರ್ಭರ ಹಾದಿ ಹಿಡಿದಾಗಲೂ ನೆನೆದು ಸಂತಸಪಟ್ಟಿದ್ದೆ’ ಹೀಗೆ ಯೋಚಿಸುತ್ತಾ ವೇದನೆಯಿಂದ ಲಕ್ಷ್ಮಣನು ಬಿಟ್ಟ ನಿಟ್ಟುಸಿರು ಭೂಮಿ ತಾಯಿಯನು ಸೋಕಿ, ಎಳೆಯ ಹುಲ್ಲುಗರಿಗಳೂ ಆ ಉಸಿರ ಬಿಸಿಗೆ ಮರುಗಿದವು.

“ಈಗೀಗ ಆಶ್ರಮದ ಸುತ್ತಾ ಸಚಿತ್ರ ಭೀತಿ ಆವರಿಸಿದೆ. ಏನೇನೋ ಅನೂಹ್ಯ ಘಟನೆಗಳು ಜರುಗುತ್ತಿವೆ. ಕೇಳಿಯೂ ನೋಡಿಯೂ ಗೊತ್ತಿಲ್ಲದ ವಿಚಿತ್ರ ಖಗಮೃಗಗಳು ಸಂಚರಿಸುತ್ತಿವೆ. ಯಾವ ಯಾವುದೋ ಹೊಸ ಹೆಜ್ಜೆ ಗುರುತುಗಳು ತಟ್ಟನೆ ಮೂಡಿರುತ್ತವೆ, ಹೊಸ ಹೊಸ ಸಂಜ್ಞೆ ಸುಳಿವುಗಳು ಕಾಣಬರುತ್ತಿವೆ. ಬಹುಶಃ ಯಾರೋ ಏನೋ ಅಪಾಯದ ಸಂಚು ನಡೆಸುತ್ತಿರಬಹುದು. ನಾವು ಹೆಚ್ಚು ಜಾಗೃತರಾಗಿರಬೇಕು ಲಕ್ಷ್ಮಣಾ... ಮೊದಲಿನಂತೆ ಸೀತೆಯನ್ನು ಅವಳ ಪಾಡಿಗೆ ಒಂದು ಹಕ್ಕಿಯಂತೆ, ಚಿಟ್ಟೆಯಂತೆ, ಮೊಲದಂತೆ ಆಡಿಕೊಂಡಿರಲು ಬಿಡುವಂತಿಲ್ಲ..” ‘ಮೊನ್ನೆ ಅಣ್ಣ ಹೇಳಿಕೊಂಡ ಈ ಮಾತುಗಳು ಸ್ವಗತದಂತೆಯೂ, ನನಗೆ ಹೇಳಿದಂತೆಯೂ ತೋರುತ್ತಿತ್ತಲ್ಲವೇ?’ ಹೀಗೆ ಯೋಚಿಸುತ್ತಲೇ ಲಕ್ಷ್ಮಣ ಪರ್ಣಕುಟೀರದ ಸುತ್ತಾ ಗೆರೆ ಎಳೆದು ಅರ್ಧವೃತ್ತ ಮುಗಿಸಿದ.

‘ಅಣ್ಣನು ಹೀಗೆ ಎಲ್ಲಾ ದಿಕ್ಕುಗಳಿಂದ ಯೋಚಿಸಿ ವಿಶ್ಲೇಷಿಸುತ್ತಿದ್ದರೆ, ನಾನು “ಅಣ್ಣಾ, ಹಾಗಾದರೆ ಅತ್ತಿಗೆಗೆ ಸ್ವಲ್ಪ ಎಚ್ಚರಿಕೆ ವಹಿಸಿರುವಂತೆ ಹೇಳಿರುವೆಯಾ? ಏಕೆಂದರೆ ಕಾಡಿನಲ್ಲಿ ಅಲೆಯುವ ನಾವಿಬ್ಬರೂ ಸದಾಕಾಲ ಧನುರ್ಧಾರಿಗಳಾಗಿಯೇ ಇರುತ್ತೀವಿ. ಯಾವ ಅಪಾಯಕ್ಕೂ ಯಾವ ಗಳಿಗೆಯಲ್ಲೂ ಸಿದ್ಧರಿರುತ್ತೀವಿ. ಆದರೆ ಅತ್ತಿಗೆ ಮಾತ್ರ ಹೂ, ಹಣ್ಣು, ಚಿಗುರು, ಚಿಟ್ಟೆ, ಮುಂಜಾವು, ಸೂರ್ಯಾಸ್ತ, ಝರಿ, ತೊರೆ, ನವಿಲು, ಚಿಗರೆ, ಮೊಲ ಎಂದು ಸಂಭ್ರಮಿಸುತ್ತಾ ಕಾಡಲ್ಲಿ ಅಲ್ಲಲ್ಲಿ ಓಡಾಡಿ ಬರುತ್ತಾರೆ. ಪರ್ಣಕುಟಿಗೆ ಬರುವ, ಇಲ್ಲಿಗೆ ಒಗ್ಗಿಹೋಗಿರುವ ಸಾಕುಪ್ರಾಣಿಗಳ ಜೊತೆಗೆ ಹೊರಗೆ ಸ್ವಚ್ಛಂದವಾಗಿ ತಿರುಗಾಡುತ್ತಿರುವ ಕಾಡುಪ್ರಾಣಿಗಳ ಮೇಲೆಯೂ ಅವರಿಗೆ ವಿಶೇಷ ಒಲವು. ಅತ್ತಿಗೆ ಅವುಗಳೊಡನೆ ಆಡಿಕೊಂಡು ಅರಸಿಕೊಂಡು ಹೊರಹೋಗಿರುವಾಗ ಅಪಾಯ ಸಂಭವಿಸಿದರೆ?” ನನ್ನ ಮಾತನ್ನು ಗಮನವಿಟ್ಟು ಕೇಳುತ್ತಿದ್ದ ಅಣ್ಣನು ತಕ್ಷಣವೇ ”ಇಲ್ಲ ಲಕ್ಷಣಾ, ಸೀತೆಗೆ ಈಗಲೇ ಏನನ್ನೂ ಹೇಳುವುದು ಬೇಡ. ಮತ್ತೂ ಗಾಬರಿಗೊಂಡಾಳು. ನಿನಗೆ ಮೊದಲೇ ಸೂಚ್ಯವಾಗಿ ಹೇಳಿದಂತೆ, ಆ ದಿನ ನಡೆದ ಶೂರ್ಪನಖಿಯ ಘಟನೆಯಿಂದ ಈ ಸುಮಕೋಮಲೆ ಬಹುವಾಗಿ ಘಾಸಿಗೊಂಡಿರುವಳು. ಆಗಾಗ್ಗೆ ಬೆಚ್ಚುತ್ತಿರುತ್ತಾಳೆ. ನಿನ್ನ ಅತ್ತಿಗೆ ಮೊದಲಿನಂತಿಲ್ಲವೆಂದು, ಏಕೋ ತೀರಾ ಅನ್ಯಮನಸ್ಕರಾಗಿ ಇರುವರೆಂದು ನೀನೇ ಹೇಳಿದೆಯಲ್ಲ. ಮರೆತೆಯಾ! ಮೊನ್ನೆ ಶ್ರೀಗಂಧದ ಮರದ ಬಳಿ ಚಿನ್ನಾಟವಾಡುತ್ತಿದ್ದ ಹುಲಿಮರಿಗಳನ್ನು ನೋಡುತ್ತಿದ್ದವಳು, ಆ ಕಡೆಯಿಂದಲೇ ಸಮಿತ್ತನ್ನು ಹೊತ್ತು ಬರುತ್ತಿದ್ದ ನಮ್ಮಿಬ್ಬರನ್ನು ಕಂಡು ಹೇಗೆ ಬೆದರಿ ಚೀರಿದಳೆಂದು. ನಾವು ಅಷ್ಟು ದುಷ್ಟರಾದೆವಾ ಲಕ್ಷ್ಮಣಾ! ಸೀತೆ ಬೆದರುವಷ್ಟು! ನಮ್ಮ ಮೇಲೆ ಈಗ ಆಕೆಗೆ ಯಾವ ಭಾವ ಬೆಳೆದಿದೆಯೋ.” ಅಣ್ಣ ಖಿನ್ನನಾಗಿ ನುಡಿದಿದ್ದ.’

ಹೀಗೆ ನೊಂದುಕೊಳ್ಳುತ್ತಾ, ಗದ್ಗದಿತನಾಗಿದ್ದ ಅಣ್ಣ ದನಿ ತಗ್ಗಿಸಿ ಕೆಳದನಿಯಲ್ಲಿ, “ನಿನ್ನ ಅತ್ತಿಗೆ ವಾರದ ಕೆಳಗಿನ ದೇಹಬಾಧೆಯಿಂದ ಸಾಕಷ್ಟು ನಿತ್ರಾಣಗೊಂಡಿದ್ದಾಳೆ. ಈ ನಡುವೆ ಪರ್ಣಕುಟಿಯಿಂದ ಹೆಚ್ಚಾಗಿ ಹೊರಬರುತ್ತಿಲ್ಲ. ಗಮನಿಸಿರುವೆಯಾ ಅದನ್ನು? ನಿನಗೆ ಗೊತ್ತಿಲ್ಲದ ಒಂದು ವಿಷಯವಿದೆ ಲಕ್ಷ್ಮಣಾ,” ಇನ್ನೂ ಮೆಲುವಾಗಿ ಹೇಳಿದ, ‘ಶೂರ್ಪನಖಿಯ ಶಾಪದಿಂದಲೇ ತನಗೆ ಬಸಿರು ಜಾರಿತು..’ ಎಂದು ಆಗಾಗ್ಗೆ ಸೀತೆ ಹಲುಬುತ್ತಿರುತ್ತಾಳೆ. ನನ್ನ ಸೀತೆ ತಾಯಾಗುವವಳಿದ್ದಳೇ ಲಕ್ಷ್ಮಣಾ! ನನಗೆ ಆ ಸೂಕ್ಷ್ಮವೂ ತಿಳಿಯದಾಯಿತೇ?! ಅಥವಾ ಇದು ಸೀತೆಯ ಭ್ರಮೆ ಎಂದುಕೊಳ್ಳಲೆ. ಹೇಗೆ ಅರ್ಥೈಸಲಿ ನಾನಿದನ್ನು.. ಸರಿ ಸರಿ, ಈಗ ಅದನ್ನೆಲ್ಲಾ ಮಾತನಾಡುತ್ತಾ ಕೂರಲು ಸಮಯವಿಲ್ಲ. ಮುಂದಿನ ಕರ್ತವ್ಯ ನಿರ್ವಹಣೆಗೆ ಬದ್ಧತೆಯಿಂದ ಸಿದ್ಧರಾಗೋಣ. ಮೈ ಮರೆಯುವುದು ಬೇಡ” ಎಂದು ಹೇಳಿದ್ದ.

ಹುಶಾರಿರುವ ಎಂದ ಅಣ್ಣನಿಗೆ ಇಂದು ಏನೆನಿಸಿತೋ.. “ನನ್ನ ಸೀತೆ ನನಗೆ ಮೊದಲಿನಂತಾಗಬೇಕು. ಬಹಳ ಆಸೆಪಟ್ಟು ಆ ಜಿಂಕೆಯನ್ನು ಕೇಳಿದ್ದಾಳೆ ಲಕ್ಷ್ಮಣಾ.’’ ಎಂದ. ನಾನು ಹೊರಡಲು ಉದ್ಯುಕ್ತನಾದಾಗ “ಬೇಡ ಲಕ್ಷ್ಮಣಾ, ನಿಲ್ಲು. ಸೀತೆ ನನ್ನೊಡನೆ ಪುನಃ ಬೆರೆತರೆ ಸಾಕು. ಮುನಿಯದೇ ನಾಕಾರು ಮಾತನಾಡಿದರೆ ಸೊಗಸು. ಆ ಜಿಂಕೆಯೇ ಏನು ಹುಣ್ಣಿಮೆಯ ಚಂದ್ರಮನ ವಿಶಾಲ ಅಂಗಳದಲ್ಲಾಡುವ ಹಾಲ್ಬಿಳುಪಿನ ಮೊಲವನ್ನು ಆಕೆ ಬಯಸಿದರೆ, ಅದನ್ನೂ ಈಗಲೀಗಲೇ ಹೋಗಿ ತಂದುಬಿಡುವೆ” ಎಂದು ಅತೀವ ಉದ್ವೇಗದಲ್ಲಿ ಮಾತನಾಡುತ್ತಾ,